doc-536
T-P-2

Reg No B G 155 30—8—72

55th Year of Publication ★ 'Satyavadi' daily, Mysore 4

In State - The First
Golden Jubilee Celebrated Paper
★
News, Views, Dharmic Moral Ethical Matters



ರಾಜ್ಯದಲ್ಲಿ ಪ್ರಥಮ
ಸುವರ್ಣ ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸಿಮ್ಲಾ ಒಪ್ಪಂದ ಪೂರ್ಣ ಪಾಲನೆಯ ನಿರ್ಧಾರ

ನಾಗ ಪೂಜೆ

ನಾಗರ ಪಂಚಮಿ ದಿನ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಸಾವರಗಾಂ ಗ್ರಾಮದಲ್ಲಿ ಒಂದು ಜಾತ್ರೆ ನೆರೆಯುತ್ತದೆ ; ಇಲ್ಲೊಂದು ನಾಗಾಲಯವಿದೆ ; ಸುತ್ತಲೂ ಎರಡು ಎರಡು ಎಕರೆ ಪಡಭೂಮಿ ; ಪ್ರತಿ ಶ್ರಾವಣ ಶುದ್ಧ ಪಾಡ್ಯದಂದು ಅಲ್ಲಿ ಒಂದು ಹಾವು, ಹಲ್ಲಿ ನುಸ್ಸು ಜೇಳು ಕಾಣಿಸಿಕೊಳ್ಳುತ್ತವೆ. ಪಂಚಮಿಯಂದು ಪೂಜಾರಿಗೆ ದೇವರು ಮೈ ಮೇಲೆ ಬಂದು, ಮೆರವಣಿಗೆಯಾಗುತ್ತದೆ. ಜನರು ನಾಗ ಸ್ತೋತ್ರ ಪಠಿಸುತ್ತಾ ತಮ್ಮ ಕೋರಿಕೆಗಳನ್ನು ಕೋರಿಕೊಳ್ಳುತ್ತಾರೆ. ಪೂಜಾರಿ ಕೆರೆಯಲ್ಲಿ ಸ್ನಾನಮಾಡಿದ ಬಳಿಕ ಈ ಮೂರು ಪ್ರಾಣಿಗಳೂ ಅಗೋಚರವಾಗುತ್ತವೆ.

ಹಿಂದೆ ಒಬ್ಬ ಬ್ರಾಹ್ಮಣ ನಾಗಪುರಾಣ ಓದಿ ಹೇಳಿ ಹಾವೊಂದನ್ನು ಪ್ರಸನ್ನೀಕರಿಸಿಕೊಂಡನಂತೆ. ಈಗ ನಾಗಾಲಯವಿರುವಲ್ಲಿದ್ದ ಒಂದು ಹುತ್ತದೊಳಗಿದ್ದ ಭಾರಿ ಹಾವು ದಿನವೂ ಆತ ಪುರಾಣ ಓದಿದ ಬಳಿಕ ಚಿನ್ನದ ನಾಣ್ಯವೊಂದನ್ನು ಅವನ ಬಳಿ ತಂದಿಡುತ್ತಿತ್ತು. ಒಮ್ಮೆ ಬ್ರಾಹ್ಮಣ ಕಾಶಿಗೆ ಹೋದಾಗ ಅವನ ಮಗ ನಾಗ ಪುರಾಣ ಓದಿ ಚಿನ್ನದ ನಾಣ್ಯ ಪಡೆಯುತ್ತಿದ್ದ. ಆದರೆ ಮಗನ ಹೆಂಡತಿ ಹೆಚ್ಚು ನಾಣ್ಯ ಸಿಗುವುದೆಂಬ ದುರಾಶೆಯಲ್ಲಿ ಪತಿಯೊಂದಿಗೆ ಹುತ್ತವನ್ನು ಅಗೆದಾಗ ಅವರಿಬ್ಬರನ್ನೂ ಹಾವು ಕಚ್ಚಿ ಕೊಂದಿತು.

ಇದು ಕಾಶಿಯಲ್ಲಿದ್ದ ಬ್ರಾಹ್ಮಣನಿಗೆ ತಿಳಿದು ಶಾಶ್ವತ್ತಾಪ-ಪಟ್ಟಾಗ, ನಾವರ ಗಾಂವ್‌ನಲ್ಲಿ ವರ್ಷದಲ್ಲಿ ಐದುದಿನ ಅಂದರೆ ನಾಗರಪಂಚಮಿಯವರೆಗೆ ನಾಗಪುರುಷ ಕಾಣಿಸಿಕೊಳ್ಳುವ ಕೃಪೆಮಾಡಿದನೆಂದೂ, ಆ ಬ್ರಾಹ್ಮಣನ ಮಗ ಮತ್ತು ಸೊಸೆಯೆ ಆ ಹಲ್ಲಿ, ಜೇಳುಗಳೆಂದೂ ಹೇಳುತ್ತಾರೆ. (ಕೃ. ಸಂ)

★

ಉಚಿತ ವಸ್ತ್ರ ನೀಡುವಿಕೆ

ಬೆಂಗಳೂರು– ರಾಜ್ಯ ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಎಲ್ಲ ಬಾಲಿಕಾ ವಸತಿಗೃಹಗಳ ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೂ ವರ್ಷಕ್ಕೆ 20 ರೂ. ವೆಚ್ಚದಲ್ಲಿ ಉಚಿತವಾಗಿ ವಸ್ತ್ರಗಳನ್ನು ನೀಡಲು ರಾಜ್ಯ ಸರಕಾರ ನಿರ್ಧರಿಸಿದೆ.

★

ಫೋಟೊ ಮಾರ್ಕ್ಸ್ ಕಾರ್ಡು

ಬೆಂಗಳೂರು— ಫೋಟೊ ಮಾರ್ಕ್ಸ್ ಕಾರ್ಡುಗಳ ಗಲಾಟೆಯಲ್ಲಿ ಸಿ ಐ ಡಿ ಯವರು 27 ಮಂದಿಯನ್ನು ಬಂಧಿಸಿ ಕಾರ್ಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಆಹಾರ ಅವಶ್ಯಕ ಪದಾರ್ಥಗಳ ವಶ

ಬೆಂಗಳೂರು— ಪೋಲೀಸರು ಮತ್ತು ಸಿ ಐ ಡಿ (ಆಹಾರ ವಿಭಾಗ) ಯವರು ಜುಲೈ ತಿಂಗಳಲ್ಲಿ ರಾಜ್ಯದಲ್ಲಿ ರೂ 23 ಲಕ್ಷ ಬೆಲೆಯ ಅವಶ್ಯಕ ಪದಾರ್ಥಗಳನ್ನು ವಶಪಡಿಸಿಕೊಂಡಿರುವರು.

★

ಸ್ವಾರಸ್ಯವಾದ ವಿನಂತಿ

ಬೆಂಗಳೂರು– ಬಾಗಲಕೋಟೆಯ ಪುರಸಭೆಯು, ಅಲ್ಲಿಯ ಪುರಸಭೆಯನ್ನು ರದ್ದು ಪಡಿಸಲೇಕೆಂದು ಸರ್ಕಾರವನ್ನು ವಿನಂತಿಸಿದೆ !

★

ಹುಲಿಯೊಂದಿಗೆ ಕಾಳಗ

ಬರೋಡ– ಸಯ್ಯಾಜಿರಾವ್ ಜೂನಲ್ಲಿ ನಡೆದ ಹೃದಯಚ್ಛೇದಕ ವಿಷಯವಿದು ಒಬ್ಬ ಗ್ರಿಲ್ಲೇ ಗಾರ್ಡಿನ ಮಗ 21 ವರ್ಷದ ಕಾಲೇಜು ವಿದ್ಯಾರ್ಥಿ ಮಹೇಶ್ ಗೆ ಹುಲಿಯೊಡನೆ ಹೋರಾಡಬೇಕೆಂಬ ಹುಚ್ಚು ಹುಟ್ಟಿತು ಜೂನಲ್ಲಿ ಹುಲಿ ಇಟ್ಟಿದ್ದ ಪಂಜರವನ್ನು ತೊಳೆಯುವದಕ್ಕಾಗಿ ಅದನ್ನು ಹಿಂಭಾಗದಲ್ಲಿದ್ದ ತಂತಿ ಬೇಲಿಯಲ್ಲಿಡಲಾಗಿತ್ತು. ಅದು ಭಾರಿ ಬಂಗಾಳಿ ಹುಲಿ; ಆದರ ಜೊತೆಗೆ ಒಂದು ಹೆಣ್ಣು ಹುಲಿಯನ್ನೂ ಬಿಡಲಾಗಿತ್ತು. ಅಂಬಾಭಕ್ತನಾದ ಮಹೇಶನು ಅಂಬಾದೇವಿ ಹೆಸರನ್ನು ಉಚ್ಚರಿಸುತ್ತಾ, 35 ಅಡಿ ಎತ್ತರದ ಬೇಲಿಯನ್ನು ಹತ್ತಿ ಹುಲಿ ಇದ್ದ ಸ್ಥಳಕ್ಕೆ ಹಾರಿದನು. ಹೆಣ್ಣು ಹುಲಿಯು ಹೆದರಿ ಹಿಂದಕ್ಕೆ ಹೋಯಿತು. ಇವನು ಆ ಹುಲಿಯನ್ನು ಕೆಣಕುತ್ತಾ, ಅದರ ಮೂಗು ಮತ್ತು ಮುಖಕ್ಕೆಲ್ಲಾ ಹೊಡೆಯಲು ಪ್ರಾರಂಭಿಸಿದಾಗ, ಅದು ರೋಷಗೊಂಡು, ಇವನನ್ನು ಕೆಳಕ್ಕೆ ಕೆಡವಿ ಕೊಂದಿತು

ಶ್ರೀ ವೆಂಕಟೇಶ್ವರಸ್ವಾಮಿಗೆ

ತಿರುಪತಿ— ಜುಲೈ ತಿಂಗಳಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದ ಉತ್ಪತ್ತಿ ಹುಂಡಿಪಣ ಸೇರಿ ರೂ 5039389 ಆಗಿದೆ

ಪತ್ರಿಕೆಗಳಿಗೆ ಬೆದರಿಕೆ ಹಾಕಲಾಗಿದೆ

ನವದೆಹಲಿ— ಪಾಕಿಸ್ತಾನದ ಪ್ರಾತೆ ಇಲ್ಲದ ಮಂತ್ರಿ ಖರ್ವದ್ ಹಸನ್ ಖಾರ್, ಅಲ್ಲಿಯ ಪತ್ರಿಕೆಗಳು ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡಿವೆ ಎಲ್ಲ ಪತ್ರಿಕೆಗಳನ್ನೂ ರಾಷ್ಟ್ರೀಕರಣ ಮಾಡುವುದಾಗಿ ಬೆದರಿಕೆ ಹಾಕಿರುವರು

ವಿದ್ಯಾರ್ಥಿಗಳ ಆಡಳಿತ

ಅಲಹಾಬಾದು– ಅಲಹಾಬಾದು ವಿಶ್ವವಿದ್ಯಾನಿಲಯದ ಆಡಳಿತವನ್ನು ಕುಪಿತ ವಿದ್ಯಾರ್ಥಿಗಳು ವಶಪಡಿಸಿಕೊಂಡರು – ವಿದ್ಯಾರ್ಥಿ ಯೂನಿಯನ್ನಿನ ಅಧ್ಯಕ್ಷ ಶ್ರೀ ಅಂಬಾ ಕುಮಾರ್ ಸಿಂಗ್‌ರವರ ನೇತೃತ್ವದಲ್ಲಿ ನಡೆಸಲಾಗುವುದು.

★

ಪತ್ನಿಗಿಂತ ಭೂಮಿ ಸಿಹಿ!

ಹೈದರಾಬಾದು— ಭೂ ಶಾಸನಕ್ಕೆ ಮೊಸವೆಸಗಲು ಅನೇಕರು ಪತ್ನಿಯವರ ವಿವಾಹವಿಚ್ಛೇದನ ಅರ್ಜಿ ಹಾಕುತ್ತಿದ್ದಾರೆ ಎಂದು ಶಾಸನಸಭೆಯಲ್ಲಿ ಶ್ರೀ ನಾಗರೆಡ್ಡಿ ಹೇಳಿದಾಗ, ಮುಖ್ಯಮಂತ್ರಿ ಶ್ರೀ ನರಸಿಂಹರಾಯರು– ಭೂಮಿ ಸಿಹಿ ಎಂದು ಹೇಳಿ, ಅದು ಗಂಡನ ಇಚ್ಛೆಯ ಆಶ್ರಯ ಹೊಂದಿದೆ ಎಂದು ಸೇರಿಸಿದರು.

●

ರೂ. 3 ಕೋಟಿ ನಷ್ಟ

ನವದೆಹಲಿ— ಸಕ್ಕರೆ ರಫ್ತಿನಿಂದ ರೂ. 3 ಕೋಟಿ ನಷ್ಟವಾಗಿರುವುದೆಂದೂ, ಸಕ್ಕರೆ ಕೈಗಾರಿಕೆ ವಹಿಸುವುದೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

★

= ಸಿಮ್ಲಾ ಒಪ್ಪಂದ

ನವದೆಹಲಿ— ಸಿಮ್ಲಾ ಒಪ್ಪಂದವನ್ನು ಅಕ್ಷರಶಃ ಪಾಲಿಸಿ, ಉಪಖಂಡದಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ವರ್ತಿಸಲು ಭಾರತ-ಪಾಕಿಸ್ತಾನಗಳು ತಮ್ಮ ನಿರ್ಧಾರವನ್ನು ಮತ್ತು ದೃಢಪಡಿಸಿವೆ

● ತಿರುಪತಿ– ಶ್ರೀ ವೆಂಕಟೇಶ್ವರ ಸ್ವಾಮಿಯ ಬ್ರಹ್ಮೋತ್ಸವವು ಸೆಪ್ಟಂಬರು 11 ರಿಂದ 9 ದಿನಗಳು ನಡೆಯುವುದು – ಅಂಕುರಾರ್ಪಣವು ನವೆಂಬರ್ 10 ರಾತ್ರಿ ನಡೆಯುವುದು.

ಪುರುಷ – ಸ್ತ್ರೀ

ಪುರುಷನನ್ನು ಅರಿಯಬೇಕಾದರೆ ಬುದ್ದಿವಂತಿಕೆ ಬೇಕು ; ಸ್ತ್ರೀಯನ್ನು ತಿಳಿಯ ಬೇಕಾದರೆ ಹೃದಯಬೇಕು.

ಪುರುಷನು ಮನೆ ಮಾಡುತ್ತಾನೆ: ಆದರೆ ಸ್ತ್ರೀ ಮಾತ್ರ ಸ್ವರ್ಗಗೃಹಮಾಡುತ್ತಾಳೆ.

ಜನತೆ ನಾಯಕರನ್ನು ಚುನಾಯಿಸುತ್ತಾರೆ ; ಸ್ತ್ರೀ ಅವರನ್ನು ವಕಾಡುತ್ತಾಳೆ.

ಪುರುಷನಿಗೆ ಕೇವಲ ಭಾವನೆಯಾಗಿರುವುದು ಸ್ತ್ರೀಗೆ ಪೂರ್ಣ ಪ್ರೀತಿಯಾಗಿದೆ.

ಸಾರಿಗೆ ತಕ್ಸೀರು

ಪಶ್ಚಿಮ ಜರ್ಮನಿಯಲ್ಲಿ ಸಾರಿಗೆ ತಕ್ಸೀರುದಾರರು ಜುಲ್ಮಾನೆಗಳನ್ನು ಇನ್ನೂ ಉದಾರ ದಾನಮಾಡುತ್ತಿರುವರು.

ಸಿಂಹಗಳ ಪಾರ್ಕು

ಹೈದರಾಬಾದು— ಇಲ್ಲಿಯ ಜೂನಲ್ಲಿ ಸಿಂಹದ ಪಾರ್ಕನ್ನು ಭಾರತ ಸರಕಾರ ನಿರ್ಮಿಸಲಿದೆಯೆಂದು ಪ್ರವಾಸ ಮಂತ್ರಿ ಡಾ || ಸರೋಜಿನಿ ಮಹಿಷಿ ಹೇಳಿದರು.

ದಿವ್ಯವಾಣಿ

ಕುರುಡರ ದೇಶದಲ್ಲಿ ಒಂದು ಕಣ್ಣಿದ್ದವನೇ ರಾಜ — ಎರಾಸ್ಮಸ್

ವುಡ್‌ಲ್ಯಾಂಡ್ 25 8 72 ರಿಂದ ಅನೋಫೆ ಪ್ರಾರಂಭ

ರಾಜೇಂದ್ರ ಕುಮಾರ್ ಅರ್ಪಿಸುವ

ಟಾಂಗೇವಾಲಾ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ — ರಾಜೇಂದ್ರ ಕುಮಾರ್ ಮುಮ್ತಾಜ್ ಐ. ಎಸ್. ಜೋಹರ್

ಸಂಗೀತ – ನೌಷದ್ ನಿರ್ದೇಶನ – ನರೇಶ್ ಕುಮಾರ್

ಅಪೆರಾ 31 8 72 ರಿಂದ

— ಆಕ್ಯಮೋಫೆ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಬುದ್ಧಾ ಮಿಲ್ ಗಯಾ

ನಟವರ್ಗ— ನವೀನ್ ನಿಶ್ಚಲ್, ಅರ್ಚನಾ, ಸೋನಿಯಾ ಸಹಾನಿ
ಓಂ ಪ್ರಕಾಶ್, ಲಲಿತಾ ಪವಾರ್
ಪ್ರತಿ ದಿನ 3 ಪ್ರದರ್ಶನಗಳು

Contribute Liberally
to the National Defence Fund

Edited, Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore

ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

★

ಆನೆ – ಹುಡುಗ

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಶ್ಶೇಧವಾಗಲಿ

Potect the Cow

Help The Gorakshana

— Humanitarian Propoganda Monthly ....

SHAKTI

SUDHA

A Superb Tonic

Bank Road Bahusar A Fair Price Shop in Actuul Practice